ವಿದ್ಯುತ್ ಕಳ್ಳತನ ಪತ್ತೆ ಹಚ್ಚಲು ಮಂಡಳಿಯಲ್ಲಿ ಜಾಗೃತದಳವಿದ್ದು ಇವರು ಗ್ರಾಹಕರ ಸ್ಥಾವರಗಳನ್ನು ದೂರುಗಳ ಆಧಾರದ ಮೇಲೂ ತಾವೇ ಸ್ವತಃ ಅನಿರೀಕ್ಷಿತ ತನಿಖೆ ನಡೆಸಿ ಅಪರಾಧ ಪತ್ತೆ ಹಚ್ಚಿ ಮುಂದಿನ ಕ್ರಮ ಕೈಗೊಳ್ಳುತ್ತಾರೆ. ಸಾರ್ವಜನಿಕರು ವಿದ್ಯುತ್ ಕಳ್ಳತನದ ಬಗ್ಗೆ ಸುಳಿವು ನೀಡಿದ್ದಲ್ಲಿ ಅವರಿಗೆ ಸೂಕ್ತ ಬಹುಮಾನ ನೀಡಲಾಗುತ್ತದೆ.

ಅ) ಗೃಹಬಳಕೆ ಸ್ಥಾವರಗಳ ವಿನಃ ಉಳಿದೆಲ್ಲಾ ಗ್ರಾಹಕರ ಸ್ಥಾವರಗಳ ಮೀಟರನ್ನು ಪ್ರತಿ ತಿಂಗಳೂ ಓದುವ ಏರ್ಪಾಡು ಮಾಡಿದೆ. ಗೃಹಬಳಕೆ ಸ್ಥಾವರಗಳ ಮೀಟರನ್ನು ಎರಡು ತಿಂಗಳಿಗೊಮ್ಮೆ ಓದಲಾಗುತ್ತದೆ. ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಒಂದು ಮಾಹೆಯಲ್ಲಿ ಮೀಟರು ಓದದಿದ್ದರೂ ಮುಂದಿನ ಮಾಹೆಯಲ್ಲಿ ಓದಿ ಬಿಲ್ಲನ್ನು ನೀಡಲಾಗುತ್ತದೆ. ಇದಕ್ಕೆ ತಕ್ಕ ಬಿಬ್ಬಂದಿ ವ್ಯವಸ್ಥೆ ಮಾಡಲಾಗಿದೆ.

ಇ) ಮಂಡಳಿಯಲ್ಲಿ ದಿ. ೩೦. ೯. ೮೯ ರಂದು ಮೀಟರು ಓದುವವರು ಓವರ್‌ಸೀಯರು ಆಪರೇಟರುಗಳು (ಇವು ಮೂರು ಒಂದೇ ವೇತನ ಶ್ರೇಣಿಯದಾಗಿದ್ದು ಪರಸ್ಪರ ಬದಲಾವಣೆ ಮಾಡಲು ಸಾಧ್ಯವಿರುವುದು) ೧೪೩ ಸ್ಥಾನ ಖಾಲಿ ಇದ್ದು ಇವನ್ನು ನೇರನೇಮಕಾತಿಯಂತೆ ತುಂಬಬೇಕಾಗಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಮಂಡಳಿಯು ಗ್ರಾಹಕರಿಂದ ಭದ್ರತಾ ಠೇವಣಿ ಪಡೆಯುವುದು ನ್ಯಾಯಭದ್ದವೂ, ಅಗತ್ಯವೂ, ಅನಿವಾರ್ಯವೂ ಆಗಿದೆ. ಇದರ ವಸೂಲಿ ಬಲವಂತ ಎಂದು ಭಾವಿಸಲಾಗದು. ಇದನ್ನು ಗ್ರಾಹಕರು ಮಂಡಳಿಗೆ ನೀಡುವುದು ಅನಿವಾರ್ಯ.

ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ವಿದ್ಯುತ್ ಸರಬರಾಜು ಮಾಡುವುದು

೩೧೬ (೬೪೮–ಎ) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ರೈತರು ಸುಮಾರು ೩ ವರ್ಷಗಳ ಹಿಂದೆಯೇ ಪಂಪುಸೆಟ್ಟುಗಳನ್ನು ಖರೀದಿಸಿದ್ದರೂ ಇಂದಿನ ತನಕವೂ ಅವರಿಗೆ ವಿದ್ಯುತ್ ಒದಗಿಸದಿರಲು ಕಾರಣವೇನು? ಅವರಿಗೆ ಎಷ್ಟು ಸಮಯದೊಳಗೆ ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ?

ಆ) ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುತ್ ಸಲಕರಣೆಗಳನ್ನು ಒದಗಿಸದೆ ವಿದ್ಯುತ್ ಸಲಕರಣೆಗಳ ಕೊರತೆಯಿಂದಾಗಿ ರೈತರಿಗಾದ ತೊಂದರೆಯ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಇದನ್ನು ಇನ್ನೂ ಎಷ್ಟು ಸಮಯದಲ್ಲಿ ಸರಿಪಡಿಸಲಾಗುವುದು ?

ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ೧೬ ಸಾಮೂಹಿಕ ನೀರಾವರಿ ಪಂಪಸೆಟ್ಟುಗಳ ಯೋಜನೆಯಲ್ಲಿ ಬರುವ ೩೨೦ ಪಂಪುಸೆಟ್ಟುಗಳ ಪೈಕಿ ಈ ವರೆಗೆ ೧೬೦ ಪಂಪುಗಳಿಗೆ ವಿದ್ಯುತ್ ಒದಗಿಸುವುದು ೩ ವರ್ಷಗಳು ಮೀರಿ ಬಾಕಿ ಇದ್ದರೂ ಕೆಲಸ ಪ್ರಗತಿಯಲ್ಲಿದೆ. ಆದಷ್ಟು ಜಾಗ್ರತೆ ಮುಂಗಿಸಲಾಗುವುದು.

ಆ) ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ಜಿಲ್ಲೆಯ ವಾರ್ಷಿಕ ಗುರಿ ಮುಟ್ಟಲು ಸಾಕಷ್ಟು ವಿದ್ಯುತ್ ಸಲಕರಣೆ ಒದಗಿಸಲಾಗುತ್ತಿದೆ. ಆದರೆ ಬೇಡಿಕೆ ಏರುತ್ತದೆ. ಬಾಕಿ ಉಳಿದಿರುವ ಹಳೇ ಪ್ರಸಂಗಗಳನ್ನು ಮುಂದಿನ ಸಾಲಿನಲ್ಲಿ ೧೯೮೯–೯೦ ರಲ್ಲಿ ಮಾಡಿ ಮುಗಿಸಲು ಸದರಿ ಜಿಲ್ಲೆಯ ವಾರ್ಷಿಕ ಗುರಿ ಹೆಚ್ಚಿಸಲು ಕ್ರಮ ಕೈಗೊಂಡಿದೆ.

ದಕ್ಷಿಣ ಕನ್ನಡಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿಗೆ ವಿದ್ಯುತ್ ಸರಬರಾಜು ಮಾಡಂವ ಬಗ್ಗೆ

೩೧೭ (೬೪೮) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿಗೆ ಈ ಹಿಂದೆ ವಿದ್ಯುತ್ತನ್ನು ನೇರವಾಗಿ ಮಂಗಳೂರಿನಿಂದ ಸರಬರಾಜು ಮಾಡುತ್ತಿದ್ದು, ಪ್ರಕೃತ ಮಂಗಳೂರಿನಿಂದ ಪುತ್ತೂರಿಗಾಗಿ